86

**ಶ್ರೀ ಎಸ್.ವ್ಹಿ. ಸಂಕನೂರ, ವಿಧಾನ ಪರಿಷತ್ತಿನ ಸದಸ್ಯರು ಇವರು ಮಂಡಿಸಿರುವ ನಿಯಮ-72 ರಡಿಯ ಪ್ರಶ್ನೆಗೆ ಉತ್ತರಿಸುವ ಕುರಿತು.**

**ಪ್ರಶ್ನೆ:**ಸಮುದಾಯ ವಿಜ್ಞಾನ ಮಹಾ ವಿದ್ಯಾಲಯ (Home Science) ಕೃಷಿ ವಿದ್ಯಾಲಯ ಧಾರವಾಡ ಇದಕ್ಕೆ ಇದ್ದ ಸ್ವಂತ ಕಟ್ಟಡ ಸಂಪೂರ್ಣ ಶಿಥಿಲಗೊಂಡು ನಿರುಪಯುಕ್ತವಾದ ಹಿನ್ನೆಲೆಯಲ್ಲಿ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿರುವ ಬೇರೆ ಬೇರೆ ಕಟ್ಟಡಗಳಲ್ಲಿ ನೇಮಕಗೊಂಡ ಬೋಧನಾ ಕಾರ್ಯ ಹಾಗೂ ಪ್ರಯೋಗಾಲಯ ತರಬೇತಿ ಕಾರ್ಯಗಳು ಸಮರ್ಪಕವಾಗಿ ನಡೆಯದೇ ಇರುವ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

****

**ಉತ್ತರ:-**

- ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ಸ್ವಂತ ಕಟ್ಟಡವು ಸಂಪೂರ್ಣವಾಗಿ ಶಿಥಿಲಗೊಂಡು ನಿರುಪಯುಕ್ತವಾಗಿರುವ ಹಿನ್ನೆಲೆಯಲ್ಲಿ ಸಮುದಾಯ ವಿಜ್ಞಾನ ಮಹಾ ವಿದ್ಯಾಲಯ (Home Science) ಕೃಷಿ ವಿದ್ಯಾಲಯ ಧಾರವಾಡ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳನ್ನು ಬೇರೆ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

- ಪ್ರಸ್ತುತ ಸಮುದಾಯ ವಿಜ್ಞಾನ ಮಹಾ ವಿದ್ಯಾಲಯ (Home Science)ದ ವಿದ್ಯಾರ್ಥಿಗಳಿಗೆ ಇದ್ದ ಸ್ವಂತ ಕಟ್ಟಡ ಸಂಪೂರ್ಣ ಶಿಥಿಲಗೊಂಡು ನಿರುಪಯುಕ್ತವಾದ ಹಿನ್ನೆಲೆಯಲ್ಲಿ, ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿರುವ ಬೇರೆ ಬೇರೆ ಕಟ್ಟಡಗಳಲ್ಲಿ ಅಗತ್ಯ ಸೌಲಭ್ಯಗಳ ಅಭಾವವಿದ್ದರೂ ಬೋಧನೆ ಹಾಗೂ ಪ್ರಯೋಗಾಲಯ ತರಗತಿಗಳನ್ನು ಕೃಷಿ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿ ಇತರ ವಿಭಾಗಗಳಿಗೆ ತೊಂದರೆಯಾಗದಂತೆ, ಹೊಂದಾಣಿಕೆ ಮಾಡಿಕೊಂಡು ಸಮರ್ಪಕವಾಗಿ ನಡೆಸಲಾಗುತ್ತಿದೆ.

**ಸಂಖ್ಯೆ**:AGRI/53/AUD/2025

**(ಎನ್.ಚೆಲುವರಾಯಸ್ವಾಮಿ)**
ಕೃಷಿ ಸಚಿವರು.